# **ಅರ್ಜಿ ನಮೂನೆ ಭರ್ತಿ ಮಾಡುವ ವಿಧಾನ**

ಅಭ್ಯರ್ಥಿಗಳು ನೀಲಿ ಅಥವಾ ಕಪ್ಪು ಬಾಲ್ ಪಾಯಿಂಟ್ ಲೇಖನಿ ಬಳಸಿ ದೊಡ್ಡ ಅಕ್ಷರಗಳಲ್ಲಿ ಸ್ಪಷ್ಟವಾಗಿ ಬರೆದು ಅರ್ಜಿಯನ್ನು ಭರ್ತಿ ಮಾಡಬೇಕು. ಮೂಲ ಅರ್ಜಿ ನಮೂನೆಯನ್ನು ಭರ್ತಿ ಮಾಡುವ ಮೊದಲು ಅಭ್ಯರ್ಥಿಗಳು ಈ ಕೆಳಗೆ ತಿಳಿಸಿದಂತಹ ಭರ್ತಿ ಸಲಹೆಗಳನ್ನು ನೋಡಿಕೊಳ್ಳುವುದು.

1. ಅರ್ಜಿದಾರರು **ಪ್ರವೇಶ ಬಯಸುವ ಕೇಂದ್ರಗಳ ಆದ್ಯತೆಯನ್ನು** ಕಡ್ಡಾಯವಾಗಿ ನಮೂದಿಸುವುದು. ಆದ್ಯತೆಗಳನ್ನು ನಮೂದಿಸದಿದ್ದಲ್ಲಿ ಅಥವಾ ತಪ್ಪಾಗಿ ನಮೂದಿಸಿದ್ದಲ್ಲಿ ಅಭ್ಯರ್ಥಿತನವನ್ನು ಪರಿಗಣಿಸುವುದಿಲ್ಲ. ಕೇವಲ ಒಂದೇ ಕೇಂದ್ರದ ಹೆಸರನ್ನು ನಮೂದಿಸಿದ್ದಲ್ಲಿ ನಮೂದಿತ ಕೇಂದ್ರಕ್ಕೆ ಮಾತ್ರ ಸೀಟು ಹಂಚಿಕೆಗೆ ಪರಿಗಣಿಸಲಾಗುವುದು.
2. **ಅರ್ಜಿದಾರರ ಪೂರ್ಣ ಹೆಸರು ಹಾಗೂ ವಿಳಾಸ:** ನಿಮ್ಮ ಹೆಸರನ್ನು ಎಸ್ಎಸ್ಎಲ್‌ಸಿ/ತತ್ಸಮಾನ ಪರೀಕ್ಷೆಯ ದಾಖಲೆಗಳಲ್ಲಿರುವಂತೆ ಬರೆಯಬೇಕು ಹಾಗೂ ಕೊಟ್ಟಿರುವ ಸ್ಥಳದಲ್ಲಿ ಅಭ್ಯರ್ಥಿಗಳು ಪತ್ರ ವ್ಯವಹಾರ ಶೀಘ್ರವಾಗಿ ತಲುಪುವಂತೆ ತಮ್ಮ ಸಂಪೂರ್ಣ ಅಂಚೆ ವಿಳಾಸವನ್ನು ಬರೆಯಬೇಕು. ಊರಿನ ಹೆಸರು ಹಾಗೂ ಸಂಪೂರ್ಣ ಪಿನ್ ಕೋಡನ್ನು ಕಡ್ಡಾಯವಾಗಿ ಬರೆಯಲೇಬೇಕು.

   **ಆಧಾರ ಸಂಖ್ಯೆ :** ಭಾರತ ಸರ್ಕಾರ ಒದಗಿಸಿರುವ 12 ಅಂಕಿಯ ಆಧಾರ ಸಂಖ್ಯೆಯನ್ನು ಬರೆಯಬೇಕು

   **ಮೊಬೈಲ್ ಸಂಖ್ಯೆ : ಕೊಟ್ಟಿರುವ ಚೌಕಟ್ಟಿನಲ್ಲಿ ಅಭ್ಯರ್ಥಿಗಳು ಚಾಲ್ತಿಯಲ್ಲಿರುವ ಮೊಬೈಲ್ ಸಂಖ್ಯೆಯನ್ನು ಕಡ್ಡಾಯವಾಗಿ ಬರೆಯಬೇಕು. ಸೀಟು ಹಂಚಿಕೆಯ ಕುರಿತು ಆಯ್ಕೆಯಾದ ಅಭ್ಯರ್ಥಿಗಳಿಗೆ ಮಾಹಿತಿಯನ್ನು SMS ಮೂಲಕ ನೀಡಲಾಗುವುದು.**

   **Email : ಕೊಟ್ಟಿರುವ ಚೌಕಟ್ಟಿನಲ್ಲಿ ಅಭ್ಯರ್ಥಿಗಳು ಚಾಲ್ತಿಯಲ್ಲಿರುವ ತಮ್ಮ Email ID ಯನ್ನು ಕಡ್ಡಾಯವಾಗಿ ಬರೆಯಬೇಕು. ಸೀಟು ಹಂಚಿಕೆಯ ಕುರಿತು ಆಯ್ಕೆಯಾದ ಅಭ್ಯರ್ಥಿಗಳಿಗೆ ಮಾಹಿತಿಯನ್ನು Email ಮೂಲಕ ತಿಳಿಸಲಾಗುವುದು.**

   **ಅರ್ಜಿಯಲ್ಲಿ ನಮೂದಿಸಿದ ಮೊಬೈಲ್ ನಂಬರ್/ಇ–ಮೇಲ್‌ನ್ನು ಬದಲಾಯಿಸುವಂತಿಲ್ಲ.**
3. **ಜನ್ಮ ದಿನಾಂಕ:** ಎಸ್.ಎಸ್.ಎಲ್.ಸಿ./ ತತ್ಸಮಾನ ಅಂಕಪಟ್ಟಿಯಲ್ಲಿರುವಂತೆ ನಿಮ್ಮ ಜನ್ಮ ದಿನಾಂಕವನ್ನು ಬರೆಯಬೇಕು.
4. **ವಯಸ್ಸು ದಿ:02.07.2022ಕ್ಕೆ :** ನಿಗದಿತ ದಿನಾಂಕಕ್ಕೆ ಪೂರ್ಣಗೊಂಡ ವಯಸ್ಸನ್ನು ನಮೂದಿಸುವುದು. (**ಅರ್ಜಿ ಸಲ್ಲಿಸುವ ಅಭ್ಯರ್ಥಿಗಳ ವಯಸ್ಸು ದಿನಾಂಕ:02.07.2022 ರಂದು 25 ವರ್ಷಗಳನ್ನು ಮೀರಿರಬಾರದು**).
5. **ಲಿಂಗ:** ಕೊಟ್ಟಿರುವ ಚೌಕಟ್ಟಿನಲ್ಲಿ ಗಂಡಾಗಿದ್ದಲ್ಲಿ ನಿಗದಿತ ಚೌಕಟ್ಟಿನಲ್ಲಿ ✓ ನಮೂದಿಸುವುದು; ಹೆಣ್ಣಾಗಿದ್ದಲ್ಲಿ ನಿಗದಿತ ಚೌಕಟ್ಟಿನಲ್ಲಿ ✓ ನಮೂದಿಸುವುದು.
6. **ಮಾತೃ ಭಾಷೆ:** ನಿಮ್ಮ ಶಾಲೆಯ ದಾಖಲೆಗಳಲ್ಲಿರುವಂತೆ ನಿಮ್ಮ ಮಾತೃ ಭಾಷೆಯನ್ನು ಬರೆಯಬೇಕು.
7. **ರಾಷ್ಟ್ರೀಯತೆ :** ನಿಮ್ಮ ರಾಷ್ಟ್ರೀಯತೆಯನ್ನು ನಮೂದಿಸುವುದು.
8. **ಪಾಲಕರ ವಿವರ:** (ಹೆಸರು, ಉದ್ಯೋಗ ಮತ್ತು ವರಮಾನ (ವಾರ್ಷಿಕ)): ನಿಮ್ಮ ತಂದೆಯ/ ತಾಯಿ/ ಪಾಲಕರ (ತಂದೆ ತಾಯಿ ಇಲ್ಲದಿದ್ದಲ್ಲಿ) ಹೆಸರನ್ನು 10ನೇ ತರಗತಿಯ ದಾಖಲೆಗಳಲ್ಲಿರುವಂತೆ ಬರೆಯಬೇಕು. ನಿಮ್ಮ ತಂದೆ ತಾಯಿಗಳ ಎಲ್ಲಾ ಮೂಲಗಳಿಂದ ಬರುವ ಒಟ್ಟು ವಾರ್ಷಿಕ ಆದಾಯವನ್ನು ನಿಗದಿಪಡಿಸಿದ ಚೌಕಟ್ಟಿನಲ್ಲಿ ನಮೂದಿಸಿ.

9. **ಮೀಸಲಾತಿಯ ಪ್ರವರ್ಗ:** ಮೀಸಲಾತಿ ಸೌಲಭ್ಯ ಬಯಸುವ ಎಲ್ಲ ಅಭ್ಯರ್ಥಿಗಳು ಪ್ರವೇಶಾತಿ ಸಮಯದಲ್ಲಿ ಜಾತಿ/ಆದಾಯಗಳ ಮೂಲ ಪ್ರಮಾಣ ಪತ್ರಗಳನ್ನು ಒದಗಿಸಬೇಕು. ಜಾತಿ/ಪ್ರವರ್ಗ ಮತ್ತು ಆದಾಯ ಪ್ರಮಾಣ ಪತ್ರಗಳು ಅರ್ಜಿ ನಮೂನೆಯಲ್ಲಿ ನಮೂದಿಸಿದಂತೆಯೇ ಇರಬೇಕು. ಕೊಟ್ಟಿರುವ ಚೌಕಟ್ಟಿನಲ್ಲಿ ದಾಖಲೆಗಳ ಅನುಸಾರ ನಿಗದಿತ ಜಾಗದಲ್ಲಿ ✓ ನಮೂದಿಸುವುದು

10. **ವಿಶೇಷ ಗುಂಪಿನ ಮೀಸಲಾತಿ:** ವಿಶೇಷ ಗುಂಪಿನ ಮೀಸಲಾತಿ ಪಡೆಯುವ ಅಭ್ಯರ್ಥಿಗಳು ಕೊಟ್ಟಿರುವ ಚೌಕಟ್ಟಿನಲ್ಲಿ ದಾಖಲೆಗಳ ಅನುಸಾರ ನಿಗದಿತ ಜಾಗದಲ್ಲಿ ✓ ನಮೂದಿಸುವುದು ಹಾಗೂ ಸೂಕ್ತ ಪ್ರಮಾಣ ಪತ್ರವನ್ನು ಅರ್ಜಿಯೊಂದಿಗೆ ಲಗತ್ತಿಸುವುದು.

11. **ಹೈದರಾಬಾದ್-ಕರ್ನಾಟಕ ಪ್ರಾಂತ್ಯದ ಸ್ಥಳೀಯ ಮೀಸಲಾತಿ ವ್ಯಾಪ್ತಿಯಲ್ಲಿ ಬರುವಿರಾ?:** ಹೈದರಾಬಾದ್-ಕರ್ನಾಟಕ ಪ್ರಾಂತ್ಯದ ಸ್ಥಳೀಯ ಮೀಸಲಾತಿ ವ್ಯಾಪ್ತಿಯಲ್ಲಿ **ಅರ್ಹರಿದ್ದಲ್ಲಿ**, ಹೌದು ಎಂದು ನಿಗದಿತ ಜಾಗದಲ್ಲಿ ✓ ನಮೂದಿಸುವುದು. ಹಾಗೂ ಸಂಬಂಧಪಟ್ಟ ಸಹಾಯಕ ಆಯುಕ್ತರಿಂದ ಪಡೆದ ಸೂಕ್ತ ಪ್ರಮಾಣ ಪತ್ರವನ್ನು ಲಗತ್ತಿಸಿರಿ.

12. **ಕೃಷಿಕರ ಕೋಟಾದಡಿಯಲ್ಲಿ ಪ್ರವೇಶ ಬಯಸುವಿರಾ?:** ಹೌದಾದಲ್ಲಿ ನಿಗದಿತ ಜಾಗದಲ್ಲಿ ✓ ನಮೂದಿಸುವುದು ಹಾಗೂ ಸಂಬಂಧಪಟ್ಟ ತಹಶೀಲ್ದಾರರಿಂದ ಪಡೆದ ಸೂಕ್ತ ಪ್ರಮಾಣ ಪತ್ರದೊಂದಿಗೆ ವಿವರಣಾ ಮತ್ತು ಪುಸ್ತಕದಲ್ಲಿ ನಮೂದಿಸಿದಂತೆ ನಿಗದಿತ ನಮೂನೆಯಲ್ಲಿ ಸಂಬಂಧಪಟ್ಟ ಪ್ರಮಾಣ ಪತ್ರಗಳನ್ನು ಲಗತ್ತಿಸಿರಿ.

13. ಎಸ್‌ಎಸ್‌ಎಲ್‌ಸಿ/ತತ್ಸಮಾನ ಪರೀಕ್ಷೆಯಲ್ಲಿ ಪಡೆದ ಅಂಕಗಳ ವಿವರ (ಅಂಕಪಟ್ಟಿಯನ್ನು ಲಗತ್ತಿಸಿರಿ): ಈ ಕೆಳಗಿನಂತೆ ನಿಗದಿತ ಸ್ಥಳದಲ್ಲಿ ಅಂಕಗಳ ವಿವರಗಳನ್ನು ನಮೂದಿಸುವುದು. ಮೂಲ ಎಸ್.ಎಸ್.ಎಲ್.ಸಿ ಅಂಕಪಟ್ಟಿ ವಿತರಣೆಯಾಗದಿದ್ದಲ್ಲಿ ತಾವು ಉತ್ತೀರ್ಣರಾದ ಪ್ರೌಢಶಾಲೆಯ ಮುಖ್ಯೋಪಾಧ್ಯಾಯರು ನೀಡಿರುವ ತಾತ್ಕಾಲಿಕ ಅಂಕಪಟ್ಟಿಯ ಪ್ರಮಾಣ ಪತ್ರವನ್ನು ಕಡ್ಡಾಯವಾಗಿ ಅರ್ಜಿಯೊಂದಿಗೆ ಲಗತ್ತಿಸಬೇಕು.

| ಒಟ್ಟು ಅಂಕಗಳು | ಪಡೆದ ಅಂಕಗಳು | ಪ್ರತಿಶತ (%) |
|---|---|---|
| 625 | 501 | 80.16% |

14. ಅರ್ಜಿ ಶುಲ್ಕದ ವಿವರ : ಅಧಿಸೂಚನೆಯಲ್ಲಿ ನಮೂದಿಸಿದಂತೆ ಅನ್ವಯವಾಗುವ ನಿಗದಿತ ಶುಲ್ಕವನ್ನು ಭರಿಸಿ ಮಾಹಿತಿಯನ್ನು ತುಂಬಿ, ಅರ್ಜಿಯೊಂದಿಗೆ ವಿಶ್ವವಿದ್ಯಾಲಯದ ಬ್ಯಾಂಕ್ ಚಲನ್ ಪ್ರತಿಯನ್ನು ಕಡ್ಡಾಯವಾಗಿ ಲಗತ್ತಿಸುವುದು

15. ಅಭ್ಯರ್ಥಿಗಳು ಮತ್ತು ಅವರ ಪಾಲಕರು /ಪೋಷಕರು ಕಡ್ಡಾಯವಾಗಿ ಅರ್ಜಿಯ ಮೇಲೆ ಸಹಿ ಮಾಡಿರಬೇಕು.